ದಾವಣಗೆರೆ ಮತ್ತು ಆದಕ್ಕೆ ಹೊಂದಿಕೊಂಡಂತೆ ಅನೇಕ ಹಳ್ಳಿಗಳ ಜನತೆ ಸಮಸ್ಯೆ

1673: ಶ್ರೀ ವೈ.ಎಂ. ವೀರಣ್ಣ, (ದಾವಣಗೆರೆ):– ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರ ಮತ್ತು ಆದಕ್ಕೆ ಹೊಂದಿಕೊಂಡಂತೆ ಅನೇಕ ಹಳ್ಳಿಗಳ ಜನತೆ ಸಮಸ್ಯೆಯ ಇತ್ಯರ್ಥಕ್ಕಾಗಿ ದಾವಣಗೆರೆ ನ್ಯಾಯಾಲಯಕ್ಕೆ ಬರಬೇಕಾಗಿರುವುದರಿಂದ ಅಪಾದನೆಗಳ ಇತ್ಯರ್ಥದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿವೆಯೇ;

ಆ) ಬಂದಿದ್ದಲ್ಲಿ ತ್ವರಿತ ವಿಲೇವಾರಿ ಮಾಡಲು ಹೆಚ್ಚುವರಿ ನ್ಯಾಯಾಲಯವನ್ನು ಆರಂಭಿಸುವರೇ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ವೈ.ಎಂ. ವೀರಣ್ಣ:– ಸನ್ಮಾನ್ಯ ಅಧ್ಯಕ್ಷರೇ, ನಾನು ದಾವಣಗೆರೆ ತಾಲ್ಲೂಕು ಮತ್ತು ಆದಕ್ಕೆ ಹೊಂದಿಕೊಂಡಿರುವ ಗ್ರಾಮಾಂತರ ಪ್ರದೇಶಗಳಿಂದ ನ್ಯಾಯಾಲಯಕ್ಕೆ ಅಪಾದನೆಗಳು ಇತ್ಯರ್ಥಕ್ಕಾಗಿ ಬಂದಂತಹ ಸಂದರ್ಭದಲ್ಲಿ ಬಹಳ ಸಂಖ್ಯೆಯಲ್ಲಿ ಬಹಳ ವರ್ಷಗಳಿಂದ ಇತ್ಯರ್ಥವಾಗದೇ ಈ ಜನರಿಗೆ ಬಹಳ ತೊಂದರೆ ಆಗಿದೆ. ಆ ದೃಷ್ಟಿಯಲ್ಲಿ ಮಾನ್ಯ ಮಂತ್ರಿಗಳು ಆದರ ಅಂಕಿಅಂಶಗಳನ್ನು ತಿಳಿಸಿಲ್ಲ. ಅದು ನಮ್ಮ ಗಮನಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಇಂಥ ಅಪಾದನೆಗಳು ಇತ್ಯರ್ಥವಾಗದೆ ಇರುವ ಬಗ್ಗೆ ಆದರ ಅಂಕಿಅಂಶಗಳನ್ನು ತರಿಸಿಕೊಂಡು ತಕ್ಷಣವೇ ಏನಾದರೂ ಆದನ್ನು ಇತ್ಯರ್ಥ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆಯನ್ನು ನೀಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಳ್ಳಿರಾಮಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಸ್ಥಾನಗಳಲ್ಲಿ ಮೊಕದ್ದಮೆಗಳು ಬಗೆಹರಿಸುವುದಕ್ಕೆ ತಡವಾಗುತ್ತಿರತಕ್ಕದ್ದು ದಾವರಣಗೆರೆಗೆ ವಿಶೇಷವಾಗಿ ಅನ್ವಯಿಸತಕ್ಕದ್ದಲ್ಲ. ರಾಜ್ಯದ ಎಲ್ಲಾ ಭಾಗದಲ್ಲಿಯೂ ಕೂಡ ಇದೆ. ದಾವಣಗೆರೆಯಲ್ಲಿನ ನ್ಯಾಯಾಸ್ಥಾನಗಳಲ್ಲಿರುವ ಮೊಕದ್ದಮೆಗಳನ್ನು ಬಗೆಹರಿಸುವುದಕೋಸ್ಕರವಾಗಿ ಒಂದು ಅಡಿಷನಲ್ ಮುನ್ಸೀಫ್ ಕೋರ್ಟ್‌ನ್ನು ಮಾಡಿದ್ದೇವೆ ಮತ್ತು Additional Judicial Magistrate First Class court ಅನ್ನು ಸ್ಥಾಪನೆ ಮ್ಯಾಡಿದ್ದೇವೆ ಮತ್ತು ಪಕ್ಕದಲ್ಲಿರತಕ್ಕ ಜಗಳೂರು ತಾಲ್ಲೂಕಿನ ಕೇಂದ್ರಕ್ಕೂ ಒಂದು ಕೋರ್ಟ್‌ನ್ನು ಕೊಡತಕ್ಕ ವ್ಯವಸ್ಥೆ ಸರ್ಕಾರದ ಯೋಚನೆಯಲ್ಲಿದೆ. ಇವೆಲ್ಲಾ ಇರುವುದರಿಂದ ಈಗ ಇರತಕ್ಕ ಮೊಕದ್ದಮೆಗಳನ್ನು ಬಗೆಹರಿಸುವುದಕ್ಕೆ ಸಾಕಷ್ಟು ಅವಕಾಶ ಇದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ. ವೈ.ಎಂ. ವೀರಣ್ಣ:– ಮಾನ್ಯ ಮಂತ್ರಿಗಳು ತಿಳಿಸಿರುವಂತೆ ಅಡಿಷನಲ್ ಮುನ್ಸೀಫ್ ಕೋರ್ಟುಗಳನ್ನು ಮಾಡಿರತಕ್ಕದ್ದು ನಿಜ, ಆದರೆ 1980ನೇ ಇಸವಿಯಿಂದ ಇಲ್ಲಿಯವರೆಗೆ ಅನೇಕ ಅಪಾದನೆಗಳು ಇತ್ಯರ್ಥವಾಗದೆ ಬಹಳ ವರ್ಷಗಳಿಂದ ಅದು ವಿಳಂಬವಾಗುತ್ತಿದೆ. ಅದರ ಬಗ್ಗೆ ಅಂಕಿಅಂಶಗಳನ್ನು ತರಿಸಿಕೊಂಡು ಸೂಕ್ತವಾದ ಸೂಚನೆಯನ್ನು ನೀಡುವುದರ ಮೂಲಕ ಅಂಥ ಮೊಕದ್ದಮೆಗಳನ್ನು ತಕ್ಷಣ ಇತ್ಯರ್ಥಗೊಳಿಸುವ ರೀತಿಯಲ್ಲಿ ಕ್ರಮತೆಗೆದುಕೊಳ್ಳುತ್ತಾರೆಯೇ ಎನ್ನತಕ್ಕ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಳ್ಳಿರಾಮಸ್ವಾಮಿ:– ಅಂಕಿಅಂಶಗಳನ್ನು ತರಿಸಿಕೊಳ್ಳುತ್ತೇವೆ. ಸಂವಿಧಾನಾತ್ಮಕವಾಗಿ

ಸರ್ಕಾರದ ಯಾವ ಮಟ್ಟದಲ್ಲಿ ಅಧಿಕಾರವಿದೆಯೋ ಆಪ್ಪರಮಟ್ಟಿಗೆ ಮಾತ್ರ ಅವರಿಗೆ ತಿಳಿಸಿ ಬೇಗನೆ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುವಂತೆ ಹೈಕೋರ್ಟ್‌ಗೆ ತಿಳಿಸುತ್ತೇವೆ.

ಅಧ್ಯಕ್ಷರು – ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಚಿತ್ರದುರ್ಗ ಜಿಲ್ಲೆಯಲ್ಲಿ ಬಂದ ಅರ್ಜಿಗಳ ಸಂಖ್ಯೆ

2227: ಶ್ರೀ ಎನ್.ಜಿ. ನಾಯಕ್, (ಮೊಳಕಾಲ್ಮೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990-91 ಹಾಗೂ 1991-92ನೇ ಸಾಲಿಗೆ ರೈತರ ಪಂಪುಸೆಟ್ಟುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಬೇಡಿಕೆಗೆ ಬಂದ ಅರ್ಜಿಗಳೆಷ್ಟು ? ಈ ಬೇಡಿಕೆಗಳಲ್ಲಿ ವಿದ್ಯುತ್ ಪೂರೈಸಲಾಗಿರುವ ಅರ್ಜಿಗಳ ಸಂಖ್ಯೆಯೆಷ್ಟು. ಬಾಕಿ ಇರುವ ಅರ್ಜಿಗಳೆಷ್ಟು;

ಆ) ಬಾಕಿ ಇರುವ ಅರ್ಜಿಗಳಲ್ಲಿ ಒಂದು ವರ್ಷ ಅವಧಿಗೂ ಮೇಲ್ಪಟ್ಟು ಬಾಕಿ ಇವರು ಅರ್ಜಿಗಳೆಷ್ಟು;

ಇ) ಹಾಗಾದರೆ ಅವುಗಳಿಗೆ ಯಾವಾಗ ವಿದ್ಯುತ್ ಪೂರೈಸುತ್ತೀರಿ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 1990–91 ಹಾಗೂ 1991–92ನೇ ಸಾಲುಗಳಲ್ಲಿ ರೈತರ ಪಂಪು ಸೆಟ್ಟುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಪೂರೈಕೆಗಾಗಿ ನೋಂದಾಯಿತವಾದ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 3787 ಮತ್ತು 4429. ಇವುಗಳ ಪೈಕಿ 1990–91 ಮತ್ತು 1991–92ರ ಸಾಲುಗಳಲ್ಲಿ ಅನುಕ್ರಮವಾಗಿ 2199 ಮತ್ತು 2447 ಅರ್ಜಿದಾರರುಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆ. ಫೆಬ್ರವರಿ 93ರ ಅಂತ್ಯದಲ್ಲಿ ಒಟ್ಟು 3364 ಅರ್ಜಗಳು ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿದ್ದುವು.

ಆ) ಬಾಕಿ ಇರುವ ಅರ್ಜಿಗಳಲ್ಲಿ ಒಂದು ವರ್ಷ ಅವಧಿಗೂ ಮೇಲ್ಪಟ್ಟು ಬಾಕಿ ಇರುವ ಅರ್ಜಿಗಳ ಸಂಖ್ಯೆ 518.

ಇ) ರೋಸ್ಟರ್ ಮತ್ತು ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಮೇರೆಗೆ ಬಾಕಿ ಉಳಿದ ಅರ್ಜಿದಾರರುಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿ

2247: ಶ್ರೀ ಉಮೇಶ ವಿ. ಕತ್ತಿ, (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ರಸ್ತೆಗಳೆಷ್ಟು;

ಆ) ಆ ರಸ್ತೆಗಳ ದುರಸ್ತಿಗೆ ಒದಗಿಸಿದ ಹಣವೆಷ್ಟು; ಯಾವ್ಯಾವ ರಸ್ತೆಗಳಿಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;